ಪ್ರತಿವರ್ಷವೂ 50 ಹುಡುಗರಿಗೆ ಉಚಿತ ವಸತಿ ಮತ್ತು ಊಟದ ವ್ಯವಸ್ಥೆಯನ್ನು ಅಲ್ಲಿ ಮಾಡಲಾಗುತ್ತಿತ್ತು. ಅಲ್ಲಿಂದ ಸಾವಿರಾರು ಪ್ರತಿಭಾವಂತರು ಬೆಳಕಿಗೆ ಬಂದು ತಮ್ಮ ಬದುಕನ್ನು ಕಟ್ಟಿಕೊಂಡಿದ್ದಾರೆ.

## ಎಲ್ಲರೊಳಗೊಂದಾಗಿ...

ಜಿ.ವಿ ಅವರು ಭಾಗವಹಿಸಿದ ಕೊನೆಯ ಕಾರ್ಯಕ್ರಮಗಳಲ್ಲಿ ಒಂದಾಗಿರಬಹುದಾದ 'ಬೆಂಗಳೂರು ಮುದ್ರಣಾಲಯ'ದ ಕ್ಯಾಲಂಡರ್‌ಗಳ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಮಾಡಿದ ಭಾಷಣ ನನ್ನ ಕಣ್ಣಿಗೆ ಇನ್ನೂ ಕಟ್ಟಿದಂತಿದೆ. 'ಈ ಕ್ಯಾಲಂಡರ್‌ಗಳನ್ನು ಅತಿ ಹೆಚ್ಚು ವರ್ಷ ನೋಡಿದವನು ನಾನೇ ಇರಬೇಕು' ಎಂದು ಜೋಕ್ ಕಟ್ ಮಾಡಿ, ಕ್ಯಾಲೆಂಡರ್ ಪರಂಪರೆಯನ್ನು ಸೊಗಸಾಗಿ ಬಿಡಿಸಿಟ್ಟಿದ್ದರು. ಆಗ ಅವರಿಗೆ 106 ವರ್ಷಗಳಾಗಿದ್ದವು. ಆವತ್ತಿನ ದಿನ ಹಿಯರಿಂಗ್ ಏಡ್ ಅನ್ನು ಅವರು ಮರೆತು ಬಂದಿದ್ದರು. ನಿಮ್ಮ ಮಾತುಗಳನ್ನು ಕೇಳಲು ಆಗುತ್ತಿಲ್ಲ ಎಂದು ಅವರು ಒದ್ದಾಡಿದ ರೀತಿ ಅವರ ಸಹೃದಯತೆಗೆ ಸಾಕ್ಷಿಯಾಗಿತ್ತು. ಇಂತಹ ಹತ್ತಾರು ಕಾರ್ಯಕ್ರಮಗಳಲ್ಲಿ ಅವರನ್ನು ನಾನು ಕಂಡಿದ್ದೇನೆ, ಕೆಲವಕ್ಕೆ ಅವರನ್ನು ಕರೆದುಕೊಂಡು ಹೋಗಿ ಬರುವ ಹೊಣೆಯನ್ನು ಹೊತ್ತಿದ್ದೇನೆ. ಅವರ ಜೊತೆ ಸಹ ಭಾಷಣಕಾರನಾಗುವ ಅದೃಷ್ಟವನ್ನೂ ಪಡೆದಿದ್ದೇನೆ. ಯಾವ ಕಾರ್ಯಕ್ರಮದಲ್ಲಿಯೂ ಅವರು ಉಲ್ಲಾಸಚಿತ್ತರಾಗದೆ ಇದ್ದ ಪ್ರಸಂಗ ಇಲ್ಲವೇ ಇಲ್ಲ. ಕೊನೆಯವರೆಗೂ ಜಿ.ವಿ ಎಂದರೆ ನಗೆಮೊಗದ ಚಿತ್ರವೇ ದೊರಕುತ್ತಾ ಇದ್ದಿದ್ದು.

ನಾನು ಸದ್ಗುರು ಶಂಕರಲಿಂಗ ಭಗವಾನರ ಜೀವನ–ಸಾಧನೆ ಕುರಿತು ಕೆಲಸ ಮಾಡುತ್ತಿದ್ದಾಗ ಜಿ.ವಿಯವರಿಂದ ಒಂದು ಅಪರೂಪದ ಮಾಹಿತಿ ಸಿಕ್ಕಿತು. ಅವರು ಶಂಕರಲಿಂಗ ಭಗವಾನರನ್ನು ಭೇಟಿ ಮಾಡಿದ್ದರು. ಅವರ ಉಪನ್ಯಾಸ ಕೇಳಿದ್ದರು. ಸುಮಾರು 70 ವರ್ಷಗಳ ನಂತರ ಆ ಉಪನ್ಯಾಸದ ಅನೇಕ ಸಂಗತಿಗಳನ್ನು ನಿನ್ನೆ ಕೇಳಿದ್ದರೇನೋ ಎನ್ನುವಷ್ಟು ಸ್ಫುಟವಾಗಿ ಹೇಳಿದ್ದರು. ಜಿ.ವಿಯವರ ಬಳಿ ಉತ್ತರ ಸಿಕ್ಕದ ಪ್ರಶ್ನೆಗಳೇ ಇಲ್ಲ, ಮಾಹಿತಿ ದೊರಕದ ವಿಷಯಗಳೇ ಇಲ್ಲ ಎಂಬುದು ನನ್ನ ಅನುಭವ.

ಹೀಗೆ ದಾಖಲಿಸುತ್ತಾ ಕುಳಿತರೆ ನೆನಪಿನ ಮೆರವಣಿಗೆ ಮುಗಿಯುವುದೇ ಇಲ್ಲ!

ನೆನಪುಗಳಿಗೆ ಸಾವೆಲ್ಲಿ?


### ಎನ್.ಎಸ್. ಶ್ರೀಧರ ಮೂರ್ತಿ

ಮಂಗಳೂರು ವಿಶ್ವವಿದ್ಯಾಲಯದಿಂದ ಅರ್ಥಶಾಸ್ತ್ರದಲ್ಲಿ ಚಿನ್ನದ ಪದಕ ಮತ್ತು ರ್‍ಯಾಂಕ್‌ನೊಂದಿಗೆ ಸ್ನಾತಕೋತ್ತರ ಪದವಿಯನ್ನು ಪಡೆದ ಶ್ರೀಧರ ಮೂರ್ತಿ ಉಪನ್ಯಾಸಕರಾಗಿ ತಮ್ಮ ವೃತ್ತಿಜೀವನವನ್ನು ಆರಂಭಿಸಿದರು. ಕೆಲಕಾಲ ಪತ್ರಿಕೋದ್ಯಮದಲ್ಲಿ ಕೆಲಸಮಾಡಿರುವ ಅವರು ಪ್ರಸ್ತುತ ಭಾರತೀಯ ವಿದ್ಯಾಭವನದ ಮಾಧ್ಯಮ ಭಾರತಿ ಕೇಂದ್ರದ ನಿರ್ದೇಶಕರು.

ಚಲನಚಿತ್ರ ಇತಿಹಾಸದ ಕುರಿತು ಆಳವಾದ ಅಧ್ಯಯನ ನಡೆಸಿರುವ ಅವರು ಸಾಹಿತ್ಯ ಮತ್ತು ಆಧ್ಯಾತ್ಮ ಕ್ಷೇತ್ರದಲ್ಲಿಯೂ ಕೆಲಸ ಮಾಡಿದ್ದಾರೆ. 'ಕನ್ನಡ ಚಿತ್ರಗೀತೆಗಳ ಚಾರಿತ್ರಿಕ ಅಧ್ಯಯನ' ಅವರ ಸಂಶೋಧನಾ ಕೃತಿ. ನಾಡಿನ ಪ್ರಮುಖ ಪತ್ರಿಕೆಗಳಲ್ಲಿ ಅವರ ನಾಲ್ಕು ಸಾವಿರಕ್ಕೂ ಹೆಚ್ಚು ಲೇಖನಗಳು ಪ್ರಕಟವಾಗಿವೆ. ಕತೆ, ಕಾದಂಬರಿ, ವಿಮರ್ಶೆ, ಸಂಶೋಧನೆ ಹೀಗೆ ವಿವಿಧ ಪ್ರಕಾರಗಳಲ್ಲಿ 48 ಕೃತಿಗಳು ಅಚ್ಚಾಗಿವೆ. ಕನ್ನಡ ಚಲನಚಿತ್ರರಂಗದ ಕುರಿತ ಹಲವು ಮಹತ್ವದ ಪುಸ್ತಕಗಳ ಸಂಪಾದಕ ಮಂಡಳಿಯಲ್ಲಿ ಕಾರ್ಯ ನಿರ್ವಹಿಸಿದ್ದಾರೆ.